**ಸಾಕ್ಷಿಗೆ ದಿನಾಂಕ:23-10-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. GVK ವಕೀಲರಿಂದ ::**

ನನ್ನ ತಂದೆ ಮೂಡಲಗಿರಿಯಪ್ಪ ರವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ಮೊದಲನೇ ಹೆಂಡತಿಗೆ ಒಬ್ಬ ಮಗ ಎಂದರೆ ಸರಿ. ಸದರಿಯವರ ಹೆಸರು ಸಿದ್ದಪ್ಪ ಆಗಿತ್ತು ಎಂದರೆ ಸರಿ. 2 ನೇ ಹೆಂಡತಿಯ ಹೆಸರು ಪಾರ್ವತಮ್ಮ ಆಗಿತ್ತು ಎಂದರೆ ಸರಿ. ನನ್ನ ತಂದೆ ಸಿದ್ದಪ್ಪ ರವರ ತಾಯಿ ತೀರಿಕೊಂಡ ನಂತರದಲ್ಲಿ ಪಾರ್ವತಮ್ಮ ರವರನ್ನು ಮದುವೆಯಾಗಿದ್ದರು ಎಂದರೆ ಸರಿ. ಸದರಿ ಪಾರ್ವತಮ್ಮ ರವರಿಗೆ 9 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ 9 ಜನರಲ್ಲಿ ನಾನು ಮೊದಲನೆಯ ಮಗ ಆಗಿರುತ್ತೇನೆ ಎಂದರೆ ಸರಿ. ನನಗೆ 3 ಜನ ಸಹೋದರರರು ಹಾಗೂ 5 ಜನ ಸಹೋದರಿಯರು ಇರುತ್ತಾರೆ ಎಂದರೆ ಸರಿ. 1 ನೇ ಹೆಂಡತಿಯ ಮಗ ಸಿದ್ದಪ್ಪ ರವರಿಗೆ ನನ್ನ ತಂದೆ ಹಿಂದೆಯೇ ಒಟ್ಟು ಕುಟುಂಬದಲ್ಲಿನ ಆ ಸ್ತಿಗಳಲ್ಲಿ ಸ್ವಲ್ಪ ಭಾಗವನ್ನು ನೀಡಿದ್ದರು ಎಂದರೆ ಸರಿಯಲ್ಲ. ಸಿದ್ದಪ್ಪ ರವರು ಭದ್ರಾವತಿಯ VISL ರಲ್ಲಿ ನೌಕರಿಯಲ್ಲಿ ಇದ್ದರು ಎಂದರೆ ಸರಿ. ಸದರಿ ಸಿದ್ದಪ್ಪ ರವರು ಮೊದಲಿನಿಂದ ಅವರ ಕುಟುಂಬಸ್ಥರ ಜೊತೆ ಶಿವಮೊಗ್ಗದಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಭದ್ರಾವತಿಯಲ್ಲಿ ವಾಸ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ನಾನು ಗ್ರಾಹಕರ ಸೊಸೈಟಿಯಲ್ಲಿ ಹಿಂದಿನಿಂದ ಕಾರ್ಯದರ್ಶಿಯಾಗಿ ಕೆಲಸ ಮಾಡಿಕೊಂಡಿರುತ್ತೇನೆ ಎಂದರೆ ಸರಿ. 1976 ರಲ್ಲಿ ನನ್ನ ತಂದೆ ಮೂಡಲಗಿರಿಯಪ್ಪ ರವರು ನನಗೂ ಹಾಗೂ ನನ್ನ ತಮ್ಮ 1 ನೇ ಪ್ರತಿವಾದಿಗೂ ಕುಟುಂಬದ ಆಸ್ತಿಗಳ ಕುರಿತು ವಿಭಾಗ ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ವಿಭಾಗದ ಸಮಯದಲ್ಲಿ ದಾವಾ ಶೆಡ್ಯೂಲ್ ಸ್ವತ್ತುಗಳನ್ನು ನಮ್ಮ ತಂದೆ ತಾಯಿಯ ಜೀವನ ನಿರ್ವಹಣೆಗೆ ಬಿಡಲಾಗಿತ್ತು ಎಂದರೆ ಸರಿಯಲ್ಲ. 1976 ರಲ್ಲಿ ನಾನು ನಮ್ಮ ಕುಟುಂಬದಿಂದ ಬೇರೆಯಾದ ನಂತರದಲ್ಲಿ ನನ್ನ ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕವಾಗಿ ವಾಸ ಮಾಡಲು ಶುರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬಂದು ಎರಡು ಮುಕ್ಕಾಲು ಎಕರೆ ಜಮೀನು ಅನ್ನು ತೆಗೆದುಕೊಂಡು ಪ್ರತ್ಯೇಕವಾಗಿ ವಾಸ ಮಾಡಲು ಶುರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ತಾಯಿಯ ಜೊತೆ ಆ ಸಮಯದಿಂದ ವಾಸ

ಮಾಡದಿದ್ದರು ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಐಟಂ ನಂಬರ್ 1 ಸ್ವತ್ತು ನನ್ನ ತಂದೆ 1978 ರಲ್ಲಿ ಕ್ರಯಕ್ಕೆ ಪಡೆದ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿ. ಅಂದರೆ ಸದರಿ ಸ್ವತ್ತನ್ನು ನಮ್ಮ ಕುಟುಂಬದಲ್ಲಿ ಆದ 1976 ರ ವಿಭಾಗದ ನಂತರ ಖರೀದಿ ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ ಐಟಂ ನಂಬರ್ 1 ರ ಸ್ವತ್ತು ಜೊತೆ ಐಟಂ 2 ರ ಸ್ವತ್ತನ್ನು ನನ್ನ ತಂದೆ ಅವರ ಜೀವಿತಾ ಅವಧಿಯಲ್ಲಿ ಅವರೇ ನಿರ್ವಹಣೆ ಮಾಡುತ್ತಾ ಅನುಭವಿಸುತ್ತಾ ಬಂದಿದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರದಲ್ಲಿ ನನ್ನ ತಾಯಿಯವರು ಉಳಿದ ಪ್ರತಿವಾದಿಗಳ ಜೊತೆ ಸೇರಿ ದಾವಾ ಶೆಡ್ಯೂಲ್ ಸ್ವತ್ತುಗಳ ನಿರ್ವಹಣೆ ಮಾಡುತ್ತಾ ಬಂದಿದ್ದರು ಎಂದರೆ ಸಾಕ್ಷಿಯು ಖಾತೆಯು ನನ್ನ ತಾಯಿಯ ಹೆಸರಿಗೆ ಆಗಿದ್ದು, ನಾನು ನಿರ್ಹವಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಜೀವಿತಾ ಅವಧಿಯಲ್ಲಿ ಅವರ ಆರೋಗ್ಯ ಮತ್ತು ಇತರೇ ಖರ್ಚುಗಳನ್ನು ಪ್ರತಿವಾದಿಗಳೇ ನೋಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಹಿಂದೆ ಮಾಡಿದ್ದ ಸಾಲವನ್ನು ಪ್ರತಿವಾದಿಗಳೇ ತಿರುವಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ 5 ಜನ ಸಹೋದರಿಯರನ್ನು ನನ್ನ ತಂದೆ ತಾಯಿಯವರೇ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ಸಹೋದರರು ಸಹ ನನ್ನ ತಂದೆ ತಾಯಿಯ ಜೊತೆ ಸೇರಿ ಮದುವೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೂ ಸಹ ನನ್ನ ತಂದೆ ತಾಯಿಯೇ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು 1976 ರಲ್ಲಿ ವಿಭಾಗ ಮಾಡಿಕೊಂಡು ನಮ್ಮ ಕುಟುಂಬದಿಂದ ಹೊರಗೆ ಹೋಗಿದ್ದರು ದಾವಾ ಆಸ್ತಿಗಳನ್ನು ಲಪಟಾಯಿಸಲು ಸುಳ್ಳು ಕತೆ ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ನನ್ನ ಸಹೋದರಿಯರ ಆಗುಹೋಗುಗಳನ್ನು ಪ್ರತಿವಾದಿಗಳೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಿಃ 09.11.2009 ರಂದು ನನ್ನ ತಾಯಿ ಭದ್ರಾವತಿಯಲ್ಲಿನ ನನ್ನ ಸಹೋದರಿ ನಿರ್ಮಲ ಎನ್ನುವವರ ಮನೆಯಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ದಿನಾಂಕದ 15 ದಿನಗಳ ಹಿಂದೆಯೇ ನನ್ನ ತಾಯಿ ಆರೋಗ್ಯ ಸರಿ ಇಲ್ಲದ ಕಾರಣ ನಿರ್ಮಲ ರವರ ಮನೆಯಲ್ಲಿ ವಾಸ ಮಾಡಲು ಪ್ರಾರಂಭ ಮಾಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳ

ಮನೆ ಹೊಸಮನೆ ಎನ್ನುವ ಗ್ರಾಮದಲ್ಲಿ ಇದ್ದು ನನ್ನ ಮನೆ ರಂಗೇನಹಳ್ಳಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಮನೆಯಲ್ಲಿ ಯಾವ ವ್ಯಕ್ತಿಗಳು ಬಂದು ಹೋಗುತ್ತಾರೆ ಎನ್ನುವ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು 2002 ನೇ ಸಾಲಿನಲ್ಲಿ ಪ್ರತ್ಯೇಕವಾಗಿ ವಾಸ ಮಾಡಲು ಶುರು ಮಾಡಿದ್ದು ಅಲ್ಲಿಯವರೆಗೂ ನಮ್ಮ ಕುಟುಂಬದ ಎಲ್ಲಾ ಆಗುಹೋಗುಗಳು ತಿಳಿದಿತ್ತು ಎಂದು ನುಡಿಯುತ್ತಾರೆ. 2002 ರ ನಂತರ ನಮ್ಮ ಕುಟುಂಬದ ಆಗುಹೋಗುಗಳು ನನಗೆ ಅಷ್ಟಾಗಿ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. 2009 ರಲ್ಲಿ ಪಾರ್ವತಮ್ಮ ರವರು ನನ್ನ ಸಹೋದರಿ ನಿರ್ಮಲ ರವರ ಮನೆಯಲ್ಲಿ ಇದ್ದ ಸಮಯದಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಒಂದು ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಿರ್ಮಲರವರು 2009 ನೇ ಸಾಲಿನಲ್ಲಿಯೇ ನನ್ನ ತಾಯಿಯ ಆರಾಧನೆ ದಿನದಂದು ಸದರಿ ವಿಲ್ ಅವರಿಗೆ ಸಿಕ್ಕಿರುವುದಾಗಿ ಪ್ರತಿವಾದಿಗಳಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ನ ಆಧಾರದಲ್ಲಿ ಪ್ರತಿವಾದಿಗಳು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡು ಇಲ್ಲಿಯವರೆಗೂ ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳ ವಿರುದ್ದ ನಾನು ಒಂದು ಪೊಲೀಸ್ ದೂರು ನೀಡಿದ್ದು ಸದರಿ ದೂರಿಗೆ ಸಂಬಂಧಪಟ್ಟ ಪ್ರಕರಣವು ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯ ತರೀಕೆರೆಯಲ್ಲಿ ಸಿಸಿ 382/2020 ರಂತೆ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯ ತರೀಕೆರೆಯಲ್ಲಿ ಈ ದಾವೆಯ ಐಟಂ 2 ಜಾಗಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಗಳು ನನ್ನ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಅಸಲು ದಾವಾ 236/2016 ರಂತೆ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯು ಪ್ರಸ್ತುತದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ.

ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ಅಣ್ಣ ಸಿದ್ದಪ್ಪ ಎನ್ನುವವರು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ತರೀಕೆರೆಯಲ್ಲಿ ಅಸಲು ದಾವಾ ಸಂಖ್ಯೆ 179/2019 ರಂತೆ ವಿಭಾಗ ಕೋರಿ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ದಾವಾ ಶೆಡ್ಯೂಲ್ ಸ್ವತ್ತುಗಳು ಸಹ ಸೇರ್ಪಡೆ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯು ಪ್ರಸ್ತುತದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ

ದಾವೆಯಲ್ಲಿ ಇವತ್ತಿನವರಗೂ ಸಹ ನಾನು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಪ್ರತಿವಾದಿಗಳ ಮೇಲೆ ಇದ್ದ ಪ್ರೀತಿಯ ಆಧಾರದಲ್ಲಿ 2009 ರಲ್ಲಿ ದಾವಾ ಶೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮರಣ ಶಾಸನ ಪತ್ರವನ್ನು ಅವರ ಸ್ವ ಇಚ್ಚೆಯಿಂದ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ
sd/-
ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ
ತರೀಕೆರೆ.

ಸಾಕ್ಷಿಯ ಸಹಿ: